ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

20
ಇಲಾಖೆ / ವಿಷಯ : DEPARTMENT / SUBJECT: ಸಂಸತ್

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ      ದಿನಾಂಕ : DATE :17/9/2020

# ಟಾಟಾ ಹೆಗಲಿಗೆ ಹೊಸ ಸಂಸತ್ ಕಟ್ಟಡ

17/9/20

**861.9** ಕೋಟಿ ರೂ. ಬಿಡ್ಡಿಂಗ್ ಮೊತ್ತ

**21** ತಿಂಗಳು ನಿರ್ಮಾಣ ಅವಧಿ

**2022** ಉದ್ಘಾಟನೆ ಗುರಿ

**1300** ಸೀಟಿಂಗ್ ಸಾಮರ್ಥ್ಯ (ಎರಡೂ ಸೇರಿ)

**60** ಸಾವಿರ ಚದರ ಮೀಟರ್ ವಿಸ್ತೀರ್ಣ

ನವದೆಹಲಿ: ಕೇಂದ್ರ ಸರ್ಕಾರದ ಬಹು ಮಹತ್ವಾಕಾಂಕ್ಷೆಯ ಸೆಂಟ್ರಲ್ ವಿಸ್ತಾ ಯೋಜನೆಯ ಭಾಗವಾದ ಹೊಸ ಸಂಸತ್ ಭವನದ ನಿರ್ಮಾಣದ ಹೊಣೆಯನ್ನು ಟಾಟಾ ಪ್ರೊಜೆಕ್ಟ್ ಲಿಮಿಟೆಡ್ ಕಂಪನಿ ಹೊತ್ತುಕೊಂಡಿದೆ.

ಬುಧವಾರವಷ್ಟೇ ಕೇಂದ್ರ ಲೋಕೋಪಯೋಗಿ ಇಲಾಖೆ (ಸಿಪಿಡಬ್ಲ್ಯುಡಿ) ಬಿಡ್ ಕರೆದಿತ್ತು. ಇದರಲ್ಲಿ ಎಲ್‌ಆ್ಯಂಡ್‌ಟಿ ಮತ್ತು ಟಾಟಾ ಪ್ರೊಜೆಕ್ಟ್ ಲಿ.ಗಳು ಮಾತ್ರ ಟೆಂಡರ್ ಕೂಗಿದ್ದವು. ಎಲ್‌ಆ್ಯಂಡ್‌ಟಿ 865 ಕೋಟಿ ರೂ.ಗಳಿಗೆ ಬಿಡ್ ಕೂಗಿದ್ದರೆ, ಟಾಟಾ ಪ್ರೊಜೆಕ್ಟ್ 861.9 ಕೋಟಿ ರೂ.ಗಳಿಗೆ ಬಿಡ್ ಮಾಡಿತ್ತು.

ಒಪ್ಪಂದದ ಪ್ರಕಾರ, ಟಾಟಾ ಕಂಪನಿ 21 ತಿಂಗಳಲ್ಲಿ ಈ ಹೊಸ ಕಟ್ಟಡವನ್ನು ನಿರ್ಮಾಣ ಮಾಡಿಕೊಡಬೇಕಾಗಿದೆ. ಎಲ್ಲವೂ ಅಂದುಕೊಂಡಂತಾದರೆ, 2022ಕ್ಕೆ ಈ ಕಟ್ಟಡವನ್ನು ಉದ್ಘಾಟನೆ ಮಾಡುವ ಉದ್ದೇಶ ಕೇಂದ್ರ ಸರ್ಕಾರದ್ದು. ಆ ವರ್ಷ ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಲಿದ್ದು, ಈ ನೆನಪಿನಲ್ಲಿ ಹೊಸ ಕಟ್ಟಡಕ್ಕೆ ಚಾಲನೆ ನೀಡಲು ಮೋದಿ ಸರ್ಕಾರ ನಿರ್ಧರಿಸಿದೆ.



## ತ್ರಿಭುಜಾಕೃತಿ

ಈಗಿರುವ ಸಂಸತ್ ಕಟ್ಟಡ ವೃತ್ತಾಕಾರದಲ್ಲಿದೆ. ಆದರೆ, ಹೊಸ ಕಟ್ಟಡ ತ್ರಿಭುಜಾಕೃತಿಯಲ್ಲಿ ತಲೆಯೆತ್ತಲಿದೆ. ಈಗಿರುವ ಕಟ್ಟಡಕ್ಕಿಂತಲೂ ಇದು ದೊಡ್ಡದಾಗಿದ್ದು, ಏಕಕಾಲದಲ್ಲಿ ಸುಮಾರು 1300 ಸದಸ್ಯರಿಗೆ ಕುಳಿತುಕೊಳ್ಳುವ ಅವಕಾಶ ನೀಡಲಿದೆ.

## ಶೀಘ್ರ ಆರಂಭ

ಸದ್ಯ, ಮುಂಗಾರು ಅಧಿವೇಶನ ನಡೆಯುತ್ತಿದ್ದು, ಇದು ಮುಗಿದ ಕೂಡಲೇ ಹೊಸ ಸಂಸತ್ ಭವನದ ಕಾಮಗಾರಿ ಆರಂಭವಾಗಲಿದೆ. ಸುಮಾರು 60 ಸಾವಿರ ಚದರ ಮೀಟರ್ ವಿಸ್ತೀರ್ಣದಲ್ಲಿ ಇದು ನಿರ್ಮಾಣವಾಗುತ್ತಿದೆ. ಇದು ಎರಡಂತಸ್ತಿನ ಕಟ್ಟಡವಾಗಿದೆ.

## 2026ಕ್ಕೆ ಪುನರ್ ವಿಂಗಡಣೆ

ಸದ್ಯ ಲೋಕಸಭೆಯಲ್ಲಿ 545 ಸದಸ್ಯರಿದ್ದಾರೆ. ಈಗಿರುವ ಜನಸಂಖ್ಯೆಗೆ ಅನುಗುಣವಾಗಿ ಲೋಕಸಭಾ ಕ್ಷೇತ್ರಗಳನ್ನು 848ಕ್ಕೆ ಏರಿಕೆ ಮಾಡಬೇಕು ಎಂದು ತಜ್ಞರು ಹೇಳುತ್ತಾರೆ. ಅಷ್ಟೇ ಅಲ್ಲ, ಮಾಜಿ ರಾಷ್ಟ್ರಪತಿ, ದಿ.ಪ್ರಣಬ್ ಮುಖರ್ಜಿ ಅವರು ಲೋಕಸಭೆಯಲ್ಲಿ ಕಡೇ ಪಕ್ಷ 1000 ಸದಸ್ಯರು ಕುಳಿತುಕೊಳ್ಳುವ ವ್ಯವಸ್ಥೆ ಇರಬೇಕು ಎಂದಿದ್ದರು. ಹೀಗಾಗಿ, ಹೊಸ ಕಟ್ಟಡದಲ್ಲಿ ಲೋಕಸಭೆಯೊಂದರಲ್ಲೇ 900 ಮಂದಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗುತ್ತಿದೆ.